ಬಂದು ಸೂರ್ಯ ಹುಟ್ಟಕು ಮುಂಚೆ ಕುಯ್ದು ಬಾಡೆಲ್ಲವ ನಡೂಮನೇಲಿ ಗುಡ್ಡೆ ಹಾಕಿ ವ್ಯಾಪಾರದಾಗಿ ಚಾಲಾಕಿ ಹೆಣ್ಣಾಗಿದ್ದ ತನ್ನೆಂಡ್ರು ಸಣ್ಣತಿಮ್ಮಿನ ಕರುದು 'ನಮಗೊಸಿ ಕೊರಬಾಡಿಗೆ ಉಳಿಸ್ಕೆಂಡು, ಅದೇಟು ರೇಟು ಫಿಕ್ಸುಮಾಡಿ ಮಾರಾಕೆ' ಎಂದು ಹೇಳಿ ಬೋಟಿಯನ್ನು ಕೈಯ್ಲಿಡ್ಕಂಡು ಹಾವು ಹರಿದಂತೆ ಸಂದಿಗೊಂದಿಲಾಸಿ ಹರಿದು ವಾಸುದೇವಪ್ಪನೋರ ಮನೆಬಾಗಿಲ ಹೊರಗಿನ ಹಿಡಿಕೆಗೆ ಆ ಬೋಟಿನಾ ಸಿಗಾಕಿಸಿ ದಡಬಡಬಾಗಿಲು ಬಡಿದು ಓಡೋಗಿ ಅವಿತುಕೊಂಡ.

ಅವತ್ತು ಶನಿವಾರ ಆಗಿದ್ದರಿಂದ ಯಾರೂ ಬೆಳ್ಳಂಬೆಳ್ಳಗೆಯೇ ದೇವರ ನೈವೇದ್ಯಕ್ಕೆ ಬೆಲ್ಲ ಮಡಿಲಕ್ಕಿಕೊಡೋಕೇ ಬಂದಿರ್‍ಬೇಕು ಎಂಬ ಅತ್ಯುತ್ಸಾಹದಿಂದ ವಾಸುದೇವಪ್ಪನೋರು ಬಾಗಿಲು ತೆರೆಯಲಾಗಿ ಬಾಗಿಲ ಹಿಡಿಕೆಗೆ ಸಿಲುಕಿದ್ದ ಬೋಟಿಯು ಹೊಸ್ತಿಲಿನ ಒಳಗೆ ಬಿತ್ತು. ಇದಕಂಡು ಅಯ್ಯನೋರು ಗಾಬರಿ ಬಿದ್ದು ಇದೆಂಗೆ ಬಂತು? ಯಾಕೆ ಬಂತು? ಎಂಬೆಲ್ಲಾ ಯೋಚನೆ ಮಾಡುವಷ್ಟರಲ್ಲೇ ಎದುರು ಮನೆ ಶಂಕರಶಾಸ್ತ್ರಿಗಳೇನಾದರೂ ಎದ್ದು ಬಂದು ಇದನ್ನ ಕಂಡರೆ ಪರಿಹಾರಾರ್ಥವಾಗಿ ಮೂರು ತಿಂಗಳು ಮನೆಯನ್ನೇ ಬಿಡಿಸಿ, ಪವಿತ್ರಕಾರ್ಯ ಅಂತೇಳಿ ಕನಿಷ್ಠ ಹತ್ತು ಸಾವಿರ ರೂಪಾಯಿ ಖರ್ಚು ಮಾಡಿಸಿಯೇ ತೀರುತ್ತಾರೆ ಎಂದು ಕ್ಷಣಾರ್ಧದಲ್ಲಿ ಊಹಿಸಿ ತಾನೇ ಒಂದು ಕಡ್ಡಿಯನ್ನು ತಕ್ಕಂಡು ಇನ್ನೇನು ಹೊಸಲಿನ ಆಚಿಕೆ ಹಾಕೋಕೆ ರೆಡಿ ಆಗುವಾಗ ಉಂತೂರ ಬಂದ. 'ಓ ಅಯ್ಯನೋರ ಮನೇಲಿ ಬೋಟಿ... ನಿಮ್ಮಂತೋರು ಮುಟ್ಟಂಗಾಗೇ ಕಣಪ್ಪೋ ನಮ್ಮಂತೋರು ತಿನ್ನಕ್ಕಾಗದಂಗೆ ರೇಟಾಗಿರೋದು. ಹೇಳಿದ್ರೆ ನಾನೇ ಅಚ್ಚುಕಟ್ಟು ಮಾಡ್ಸಿ ಕೊಡ್ತಿದ್ನಲ್ಲ ಬುದ್ದಿ...' ಉಂತೂರ ಹುಸಿನಗ ನಕ್ಕ.

'ಛೆ... ಛೆ... ಯಾವನೋ ಮುಂಡೇ ಮಗ ಬೋಟಿ ಎಸೆದು ಹೋಗಿದ್ದಾನೆ ಕಣಯ್ಯ' ಎಂದು ವಿವರಿಸುವಾಗಲೇ ಎದುರು ಮನೆಯ ಶಂಕರಶಾಸ್ತ್ರಿಗಳು ಮನೆಯ ಕಿಟಕಿಯನ್ನು ತೆಗೆದದ್ದು ಕಂಡಿತು. 'ಉಂತೂರ, ಆ ಶಂಕರ ಕಾಣಕು ಮುಂಚೆ ಇದನ್ನ ತಾಂಡು ಹೋಗೋ' ಎಂದರು. 'ಊಃ... ಸ್ವಾಮಿ ತಕ್ಕಂತೀನಿ' ಅಂದು ಅಯ್ಯನೋರ ಕೈಲಿದ್ದ ಕಡ್ಡಿ ಈಸ್ಕಂಡನು. ಇತ್ತಲಾಗೆ ಶಂಕರ ಶಾಸ್ತ್ರಿಗಳು ಇನ್ನೇನು ಆಚೆ ಬರುವ ಸಕಲ ಸದ್ದು-ಗದ್ದಲಗಳೂ, ಶಕುನಗಳೂ ಒಟ್ಟೊಟ್ಟಿಗೆ ಆಗುತ್ತಿದ್ದರೆ ವಾಸುದೇವಪ್ಪನೋರ ಹೃದಯ ಹಾರಾಡಿ ಬಡಕಂತಿತ್ತು. 'ಉಂತೂರ ಬೇಗ ತಕ್ಕೋಳೋ' ಎಂದು ಆತುರ ಮಾಡಿದರು. ಉಂತೂರನು ಇಂಥಾ ಮಾತಿಗೇ ಕಾದು ನಿಂತವನಾಗಿದ್ದರಿಂದ ತನ್ನ ಭುಜವ ಕೆರಕೊಳ್ಳುತ್ತಾ 'ಸ್ವಾಮಿ ಇದುನ್ನ ತಕ್ಕಂಬೇಕು ಅಂದ್ರೆ ಚಾರ್ಜು ಆಗ್ತದೆ' ಎಂದ.

'ಚಾರ್ಜು... ಎಷ್ಟು?'

'ನೂರು ರೂಪಾಯಿ'

'ಥೂ... ಮಾದಿಗ ಮುಂಡೆ ಮಗನೇ ಐವತ್ತು ಕೊಡತೀನಿ ಎತ್ತು' ಅಂದ ಕೂಡ್ಲೇ ಮಕವನ್ನ ತಾವರೆಯಂತೆ ಅರಳಿಸ್ಕೆಂಡು ಕಡ್ಡಿ ಸಪೋರ್ಟ್ ತಕ್ಕಂಡು ಬೋಟಿನ ಹೊಸಲಿಂದ ಆಚೆಗೆ ಎಳಕಂಡು ಥೇಟ್ ನರಸಿಂಹನ ತರ ಕೊರಳಿಗೆ ಆಕ್ಕೊಂಡು ನಿಲ್ಲೋದಕ್ಕೂ ಶಂಕರ ಶಾಸ್ತ್ರಿಗಳು ಹೊರಬಂದು 'ಇದೇನ್ ಸ್ವಾಮಿ ಬೆಳ್ಳಬೆಳ್ಳಗೆನೇ ಇಂಥಾ ಕೆಲಸ ಆಯ್ತು ನಿಮಗೆ. ಹೋಗಿ-ಹೋಗಿ ಮಡಿಯಾಗಿ' ಅನ್ನೋದಕ್ಕೂ ಒಂದೇ ಆಗಿ ವಾಸುದೇವಪ್ಪನೋರು ಈವರೆಗೆ ತಮ್ಮ ಎದೇಲಿ ಕುದೀತಿದ್ದ ಬಿಸಿ ಉಸಿರನ್ನು ಹೊರಕ್ಕೆ ಬಿಟ್ಟು ಹೊಸ ಗಾಳಿ ತಕ್ಕಂಡರು. ಉಂತೂರ ವಾಸುದೇವಪ್ಪನೋರ ಕಣ್ಣಿಗೆ ತಮ್ಮ ಹತ್ತಾರು ಸಾವಿರ ರೂಪಾಯಿ ಹಣ ಉಳಿಸಿದ ಸಾಕ್ಷಾತ್ ಶ್ರೀನಿವಾಸನಾಗಿಯೇ ಕಂಡು ಬಂದ. ಇದೇ ಖುಷಿಗೆ ಒಳೀಕೋಗಿ ಮೊನ್ನೆ ತಂದಿಟ್ಟದ್ದ ತಟ್ಟೆಕಾಸಿನ ಪುಟ್ಟ ಚೀಲದೊಳಗಿಂದ ಹತ್ತರ ಐದು ನೋಟುಗಳನ್ನು ತಂದು ಉಂತೂರನ ಕೈಗಾಕಿದರು. ಹೋದ ಅರ್ಧಗಂಟೆ ಒಳಗೆ ಐವತ್ತು ರೂಪಾಯಿ ದುಡಿದು ಬೀಗಿದ ಉಂತೂರನು ತನ್ನ ಮನೀಗೆ ಬರೋದರೊಳಗೆ ಅವನ ಹೆಂಡತಿ ಸಣ್ಣದಿಮ್ಮಿ ಗುಡ್ಡೆಗಿಷ್ಟು ಅಂತೇಳಿ ರೇಟು ಫಿಕ್ಸು ಮಾಡಿ ಮ್ಯಾಕೆ ಬಾಡೆಲ್ಲ ಮಾರಾಕಿ ಒಂದೂವರೆ ಸಾವಿರ ರೂಪಾಯಿ ದುಡಿದಿದ್ದಳು. ಅವತ್ತು ಉಂತೂರ ಮನೆಯಲ್ಲಿ ಬೋಟಿ ಸಾರು ಗಂಮ್ಮೆಂದಿತು. ಅವತ್ತು ಬೆಳಗ್ಗೆಯೇ ಚಿಕ್ಕಕೆಂಪ ಉಂತೂರನ ಚೂಟಿ ಬುದ್ದಿಯ ಬಲದಿಂದ ನಡುಗಾ ತಲೆಯ ಕುಲಸ್ಥರ ಸಮ್ಮುಖದಲ್ಲಿ ಶ್ರೀನಿವಾಸನ ಗುಡಿಯ ದುಬ್ಬೀ ಗಡಿಗೆಗೆ 101ರೂಪಾಯಿ ತಪ್ಪಿನ ಹಣವನ್ನು ಹಾಕಿದ.

ಅಮೆರಿಕದಿಂದ ವಾಪಸ್ಸಾಗಿದ್ದ ವಾಸುದೇವಪ್ಪನೋರ ಮಗರು ಸಂಪಿಗೆಯಲ್ಲಿ